**ದಿ: 06-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ವಾದಿ ಪರ ವಕೀಲರಾದ ಶ್ರೀ. ಎನ್.ಎನ್. ರವರಿಂದ:–**

ಈ ದಾವೆಯಲ್ಲಿ ನಾನು ವಾದಿಯಾಗಿದ್ದು ಇಂದು ನನ್ನ ಮೌಖಿಕ ಸಾಕ್ಷದ ಬದಲು ಈ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿ ಮತ್ತು ನಿಜ ಇರುತ್ತವೆ. ಅವುಗಳನ್ನು ತಿಳಿದುಕೊಂಡು ನಾನು ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ.

ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

1. ರೇಖಲಮರಡಿ ಗ್ರಾಮದ ಜಮೀನಿನ ಸರ್ವೆ ನಂಬರ್ 6/ಅ ಇದರ 04 ಕೈಬರಹದ ಪಹಣಿಗಳನ್ನು ಕ್ರಮವಾಗಿ ನಿ ಪಿ 1 ರಿಂದ 4 ಎಂದು ಗುರುತಿಸಲಾಯಿತು.
2. ರೇಖಲಮರಡಿ ಗ್ರಾಮದ ಜಮೀನಿನ ಸರ್ವೆ ನಂಬರ್ 6/*/1ಅ ಇದರ 06 ಕಂಪ್ಯೂಟರ್ ಪಹಣಿಗಳನ್ನು ಮತ್ತು 1 ಮುಟೇಶನ್ ಕ್ರಮವಾಗಿ ನಿ ಪಿ 5 ರಿಂದ 11 ಎಂದು ಗುರುತಿಸಲಾಯಿತು.
3. ದಿನಾಂಕ: 21-10-2023 ರಂದು ತಹಶೀಲ್ದಾರ ಕಾರ್ಯಾಲಯ ದೇವದುರ್ಗ ರವರು ನೀಡಿರುವ ಹಿಂಬರಹವನ್ನು ನಿ ಪಿ 12 ಎಂದು ಗುರುತಿಸಲಾಯಿತು.
4. ಸರ್ವೆ ಇಲಾಖೆಯವರು ನೀಡಿರುವ ನೋಟಿಸ್ ಮತ್ತು ಹೇಳಿಕೆ ಪತ್ರವನ್ನು ನಿ ಪಿ 13 ಮತ್ತು 14 ಎಂದು ಗುರುತಿಸಲಾಯಿತು.

**ಪಾಟೀಸವಾಲು: ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ